ಶ್ರೀ ಎನ್. ಚಿಕ್ಕೇಗೌಡ.—ಒಂದು ಕೆ. ಜಿ. ಎನ್, ಅಂದರೆ, 2.2 ಕೆ. ಜಿ. ಯೂರಿಯಾ, ಮತ್ತು 4 1 ಕೆ.ಜಿ. ಅಮೋನಿಯಂ ಸಲ್ಫೇಟ್. ಇದರ ಪ್ರಕಾರ ನಾವು 6 ಕೆ.ಜಿ. ಎನ್, ಗೊಬ್ಬರ ವನ್ನು ಒಂದು ಎಕರೆಗೆ ಕೊಡುತ್ತಿದ್ದೇವೆ. ಅಂದರೆ, ಒಂದು ಎಕರೆಗೆ 16 ಕೆ. ಜಿ. ಯೂರಿಯಾ ಆಯಿತು, ಮತ್ತು 64 ಕೆ. ಜಿ. ಅಮೋನಿಯಂ ಸಲ್ಫೇಟ್ ಗೊಬ್ಬರವನ್ನು ಕೊಡುತ್ತಿದ್ದೇವೆ. ಸುಮ್ಮನ ತಾವು ಅರ್ಥಮಾಡಿಕೊಳ್ಳದೆ ಮಾತನಾಡುತ್ತೀರಿ.

ಶ್ರೀ ಕೆ. ಎಚ್. ಹನುಮೇಗೌಡ.—ಅದು ನಮಗೆ ಅರ್ಥವಾಗಲಿಲ್ಲ. ಇದಕ್ಕಿಂತ ಒಂದು ಐದು ಕೆ. ಜಿ. ಕಡಿಮೆ ಕೊಟ್ಟರೂ ಪರವಾಗಿಲ್ಲ.

ಅಧ್ಯಕ್ಷರು.—ಈಗ ತಾನೇ ಸ್ಟೇಟ್‌ಮೆಂಟ್ ಒದಗಿಸಿ ಆಗಿದೆ, ಮಾನ್ಯ ಸದಸ್ಯರು ಅದನ್ನು ಸರಿಯಾಗಿ ಓದಿಕೊಳ್ಳಬೇಕು.

Matter under Rule 312

re: Farmation of Road in Mandya in violation of the Court order

†ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ನಾನು ಸರ್ಕಾರದವರು ಮಂಡ್ಯಾ ಜಿಲ್ಲೆಯಲ್ಲಿ ತೆಗೆದುಕೊಂಡಿರುವ ಒಂದು ರೋಡಿನ ಕೆಲಸದ ಬಗ್ಗೆ, ನಂಕ್ಷಿಪ್ತವಾಗಿ ಒಂದೆರಡು ಮಾತು ಗಳನ್ನು ಹೇಳುತ್ತೇನೆ.

ಅಧ್ಯಕ್ಷರು.—ನಭೆ ಮುಗಿಯುವ ವೇಳೆಯಲ್ಲಿ ಅದನ್ನು ತೆಗೆದುಕೊಳ್ಳೋಣ.

ಶ್ರೀ ಎಚ್. ಟಿ ಕೃಷ್ಣಪ್ಪ.—ನಂಕ್ಷಿಪ್ತವಾಗಿ ಹೇಳುತ್ತೇನೆ, ಪರಿಸ್ಥಿತಿ ಬಹಳ ಗಂಭೀರ ವಾಗಿದೆ. ಆದ್ದರಿಂದ ನಾನು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ. ಇದು ಒಂದು ನಣ್ಣ ರಸ್ತೆಗೆ ನಂಬಂಧಪಟ್ಟ ನಿಷಯ. ರ್ತ ನಣ್ಣದಾದರೂ ನಹ ಇದರ ಚರಿತ್ರೆ ಬಹಳೆ ದೊಡ್ಡದು. ಈಗ ಅಲ್ಲಿ ಏನಾಗಿದೆ ಎಂದರೆ, ಒಂದೂವರೆ ಫರ್ಲಾಂಗ್ ರಸ್ತೆಯನ್ನು ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿಯ ಅಂಕುಶಾಪುರದ ನರ್ವೆ ನಂಬರ್ 46 –47 ರಮಧ್ಯೆ ಮಾಡುತ್ತಿದ್ದಾರೆ. ಅಲ್ಲಿ 300 ಜನ ಪೋಲೀನರನ್ನು ಇಟ್ಟುಕೊಂಡು ರಸ್ತೆಯ ಕೆಲನವನ್ನು ಮಾಡುತ್ತಿದ್ದಾರೆ. ಇದನ್ನು ಕೋರ್ಟ್ ಆರ್ಡರ್ ಉಲ್ಲಂಘನೆ ಮಾಡಿ ಮಾಡಿನುತ್ತಿದ್ದಾರೆ. ಮಾನ್ಯ ಲೋಕೋಪಯೋಗಿ ಮಂತ್ರಿಗಳ ಆಜ್ಞೆಯನ್ನು ಉಲ್ಲಂಘನೆ ಮಾಡಿ ರಸ್ತೆಯ ಕೆಲನವನ್ನು ಮಾಡಿನುತ್ತಿದ್ದಾರೆ. ಈ ತರಹ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಮುಗ್ಧ ಜನತೆಯ ಮೇಲೆ ದೌರ್ಜನ್ಯವನ್ನು ತೋರಿನುವುದು ಇಲ್ಲಿ ವ್ಯಕ್ತವಾಗಿದೆ. ಮಾನ್ಯ ಮುಖ್ಯ ಮಂತ್ರಿ ಗಳು ಇಪ್ಪೊಬ್ಬ ಮಂತ್ರಿಗಳು ಪೋಲೀನರನ್ನು ಇಟ್ಟುಕೊಂಡು ರಸ್ತೆಯನ್ನು ಮಾಡಿಯೇ ತೀರ ಬೇಕಾಗಿದೆ ಎಂದು ಹುಕುಂ ಕೊಟ್ಟಿದ್ದಾರೆ. ರಸ್ತೆಯ ಕೆಲನ ಆಗುತ್ತಿದೆ. 1957ನೇ ಇನವಿ ಯಿಂದಲೂ ಈ ರಸ್ತೆಯನ್ನು ಮಾಡಕೂಡದು ಎಂದು ಬಿಚ್ಚು ಮನನ್ಸಿನಿಂದ ಹೇಳುತ್ತಿದ್ದೇನೆ. ಈ ಮನೆಯ ನದನ್ಯರಾದ ಮಾನ್ಯ ಬಿಳಿಗೌಡರಿಗೆ ಒಬ್ಬರಿಗೆ ಮಾತ್ರ ಇದು ಪ್ರಯೋಜನವಾಗುತ್ತದೆ. ಮತ್ತೆ ಯಾರಿಗೂ ಪ್ರಯೋಜನವಾಗುವುದಿಲ್ಲ, ಅವರ ಒಂದು ಮೂರು ಎಕರೆ ಜಮೀನಿಗೋನ್ಕರ, ನಾರ್ವಜನಿಕರ ಹಿತವನ್ನು ಪೂರ್ಣವಾಗಿ ಕೈಬಿಟ್ಟು ರಸ್ತೆಯನ್ನು ಮಾಡುತ್ತಿದ್ದಾರೆ. ಏನಾಗಿದೆ ಎಂದರೆ ಒಂದು ಹಳ್ಳದಲ್ಲಿ ರಸ್ತೆಯಾಗಬೇಕು ಎಂದು ಇವರು ಕೇಳಿರತಕ್ಕದ್ದು. ಒಂದು ಕೆರೆಗೆ ನೀರು ಹೋಗತಕ್ಕ ಹಳ್ಳ ಇದು. ಈ ಹಳ್ಳದಲ್ಲಿ ರಸ್ತೆ ಮಾಡಿದ್ದೆ, ಹಳ್ಳ ಮುಚ್ಚಿದರೆ, ಆಜು ಬಾಜಿನ ಜಮೀನು ಮುಳುಗಡೆಯಾಗಿ, ರೈತರಿಗೆ ನಷ್ಟವಾಗುತ್ತದೆ. ಇದನ್ನು ರೈತರು ಸರಕಾರಕ್ಕೆ ಪದೇ ಪದೇ ಮನವಿ ಮಾಡಿಕೊಳ್ಳುತ್ತಿದ್ದಾರೆ. ಮೊದಲ ನಾರಿ ಷುಗರ್‌ಕೇನ್ ನೆಸ್ ಫಂಡ್‌ನಿಂದ ಈ ಒಂದು ರಸ್ತೆಯಾಗಬೇಕು ಎಂದು ಅರ್ಜಿಯನ್ನು ಯಾರೋ ಕೊಟ್ಟರು. ನೂಪರೆಂಟೆಂಡಿಂಗ್ ಇಂಜನಿಯರ್ ಅವರೂ ನಹ ನ್ಥಳ ಪರೀಕ್ಷೆ ಮಾಡಿ ಷುಗರ್‌ಕೇನ್ ನೆಸ್ ಫಂಡ್‌ನಿಂದ ರಸ್ತೆಯನ್ನು ಮಾಡುವುದಾದರೆ ಬಹಳ ಜನ ರೈತರಿಗೆ ತೊಂದರೆಯಾಗುತ್ತದೆ, ಒಬ್ಬರಿಗೆ ಈ ರಸ್ತೆಯಿಂದ ಅನುಕೂಲ ಆಗುವುದಾದರೆ ಈ ರಸ್ತೆಯೇ ಬೇಕಿಲ್ಲ, ತಾಂತ್ರಿಕವಾಗಿ ರಸ್ತೆಯನ್ನು ಮಾಡುವುದರಿಂದ ಅನಾನುಕೂಲ ಜಾನ್ತಿಯಾಗುತ್ತದೆಯೇ ಹೊರತು ಅನುಕೂಲ ಮಾತ್ರ ಆಗುವುದಿಲ್ಲ. ಒಂದು ವೇಳೆ ರಸ್ತೆಯನ್ನು ಮಾಡಿದರೂ ಕೂಡ ಇದು ಕೊಚ್ಚಿ ಹೋಗುತ್ತದೆ ಎನ್ನುವ ಅಭಿಪ್ರಾಯವನ್ನು ಕೊಟ್ಟು ಅದನ್ನು ಬಿಟ್ಟರು. ಮತ್ತೇ ಪುನಃ 1967ನೇ ನಿನವಿಯಲ್ಲಿ ಇದಕ್ಕೆ ಮಂಜೂರಾತಿ ಮಾಡಿದರು. ಆಗಲೂ ಸಹ ರೈತರು ಈ ರಸ್ತೆಯನ್ನು ಮಾಡಕೂಡದು ಎಂದು ಅರ್ಜಿಯನ್ನು ಕೊಟ್ಟುಕೊಂಡ ಮೇಲೆ ಸರ್ಕಾರದವರು ಇದನ್ನು ಪುನಃ ವಜಾ ಮಾಡಿದರು.

ಅಧ್ಯಕ್ಷರು.—ಏನು ಆಗಬೇಕು ಎನ್ನುವುದನ್ನು ಮಾತ್ರ ಹೇಳಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಸಾರ್ವಜನಿಕರ ಹಿತವನ್ನು ದೂರೀಕರಿಸಿ, 300 ಜನ ಪೋಲೀಸರನ್ನು ಇಟ್ಟುಕೊಂಡು ರಸ್ತೆಯನ್ನು ಮಾಡಿಸುತ್ತಿದ್ದಾರೆ. ಕೊಪ್ಪ ಎನ್ನ ತಕ್ಕ ಗ್ರಾಮಕ್ಕೆ ಪ್ರವೇಶ ಮಾಡದ ಹಾಗೆ ಪೋಲೀಸರನ್ನು ಇಟ್ಟುಕೊಂಡು ರಸ್ತೆಯನ್ನು ಮಾಡಿಸುತ್ತಿದ್ದಾರೆ ರೈತರು ಕೋರ್ಟಿಗೆ ಹೋಗಿ ಇಂಜಕ್ಷನ್ ಆರ್ಡರ್ ತೆಗೆದುಕೊಂಡು ಬಂದರೂ ಸಹ ಅದನ್ನು ಉಲ್ಲಂಘನೆ ಮಾಡಿ ರಸ್ತೆಯನ್ನು ಮಾಡುತ್ತಿದ್ದಾರೆ. ಸರ್ಕಾರದ ಮೇಲೆ ಪದೇ ಪದೇ ಒತ್ತಾಯ ಬಿದ್ದುದರಿಂದ ಈ ಕೆಲಸ ಆಗುತ್ತಿದೆ. ನಾನು ಅಧಿಕಾರಿಗಳನ್ನು ದೂರುವುದಿಲ್ಲ. ಅಧಿಕಾರಿಗಳು ತಮ್ಮ ಮೇಲಿನ ಒತ್ತಡವನ್ನು ಸಹಿಸಿಕೊಳ್ಳಲಾರದೆ ಈ ಕೆಲಸವನ್ನು ಮಾಡಬೇಕಾದ ಪರಿಸ್ಥಿತಿ ಬಂತು. ಮಾನ್ಯ ಮುಖ್ಯಮಂತ್ರಿಗಳು, ಆಸ್ಥಳದ ಮಂತ್ರಿಗಳು ತಮ್ಮ ಪ್ರಭಾವವನ್ನು ಬೀರಿ, ಏನೂ ತಿಳಿಯದೆ ಇರತಕ್ಕ ಜನತೆಯ ಮೇಲೆ ದೌರ್ಜನ್ಯವನ್ನು ಮಾಡಿದ್ದಾರೆ.

ಮಂಡ್ಯ ಜಿಲ್ಲೆ ಒಂದು ದೃಷ್ಟಿಯಿಂದ ಅನಾಥವಾಗಿದೆ, ಹೇಳುವವರು ಇಲ್ಲ, ಕೇಳುವವರು ಇಲ್ಲ. ಅಲ್ಲಿ ಪೋಲೀಸ್ ರಾಜ್ಯ ನಡೆಯುತ್ತಿದೆ. ಇದೊಂದೇ ಪ್ರಕರಣ ಅಲ್ಲ, ಹತ್ತಾರು ಪ್ರಕರಣಗಳಿವೆ, ಸಮಯ ಬಂದಾಗ ಹೇಳುತ್ತೇನೆ. This is the letter addressed to the Deputy Commissioner by the Secretary: 'I am to request you to take necessary action to demark and fix up the boundaries, evict the encroachers and give possession of the land to the P. W. D. After this process is completed, work may be taken up to form the road limiting the width to the space available.' ಎನ್‌ಕ್ರೋಚ್‌ಮೆಂಟ್ ಆದ ಜಾಗದಲ್ಲಿ ರಸ್ತೆ ಮಾಡಿ ಎಂದು ಆರ್ಡರ್ ಮಾಡಿದ್ದಾರೆ. ಬೇರೆ ಕಡೆ ಮಾಡಬೇಡಿ ಎಂದು ನಿರ್ದಿಷ್ಟವಾಗಿ ಹೇಳಿದ್ದಾರೆ.

11-00 A. M.

He has finally, specifically stated that under no circumstances the halla should be closed, and the temporary injunction order, which was subsequently made absolute by the learned Munsiff, Mandya, may also be taken into consideration at this juncture. Ad-interim injunction granted against the petitioner, *i.e.*, Government restraining it from forming the road in halla is made absolute till the disposal of the suit. ಮಾನ್ಯ ಮಂತ್ರಿಗಳು ಹಳ್ಳದ ಪೊಝಿಷನ್‌ನಲ್ಲಿ ರಸ್ತೆ ಮಾಡಕೂಡದೆಂದು ಆದೇಶ ಕೊಟ್ಟಿದ್ದಾರೆ. ರಸ್ತೆ ಮಾಡುವುದಾದರೂ ಸಹ ಎಲ್ಲಿ ಎನ್‌ಕ್ರೋಚ್‌ಮೆಂಟ್ ಇದೆ ಅದನ್ನು ಬಿಡಿಸಿಕೊಂಡು ಮಾಡಬೇಕೆಂದು ಹೇಳಿದ್ದಾರೆ. ಎನ್‌ಕ್ರೋಚ್‌ಮೆಂಟ್ ಆದ ಜಮೀನಿನಲ್ಲಿ ರಸ್ತೆಗೆ ಸಾಕಾದಷ್ಟು ಜಾಗ ಇಲ್ಲದೇ ಇರುವುದರಿಂದ ಹಳ್ಳವನ್ನು ಸೇರಿಸಿ ರಸ್ತೆ ಮಾಡುವ ಪ್ರಸಂಗ ಒದಗಿತು. ಸರ್ಕಾರ ಪ್ರಭಾವ ಬೀರಿ ರಸ್ತೆ ಮಾಡಿದ್ದಾರೆ. 1957 ರಿಂದ ಇದಕ್ಕೆ ಚರಿತ್ರೆ ಇದೆ. ಕೋರ್ಟಿಗೆ ಸಹ ಹೋಗಿ ಇಂಜಂಕ್ಷನ್ ತಗೆದುಕೊಂಡರು. ಮಾನ್ಯ ಮಂತ್ರಿಗಳ ಹುಕುಂಗೂ ಬೆಲೆ ಇಲ್ಲ, ಕೋರ್ಟಿನ ಆರ್ಡರ್‌ಗೂ ಬೆಲೆ ಇಲ್ಲ. ಒಬ್ಬ ಮಂತ್ರಿ ಮಾಡಿದಂತಹ ಹುಕುಂನ್ನು ಇನ್ನೊಬ್ಬ ಮಂತ್ರಿ ಉಲ್ಲಂಘಿಸಿದರೆ ಹೇಗೆ ? ಜನ ಶಾಂತಿಯಿಂದ ಜೀವನ ಮಾಡುವುದಕ್ಕಾಗುತ್ತದೆಯೇ ? ಪ್ರಜೆಗಳಿಗೆ ನ್ಯಾಯ ದೊರಕಿಸಿಕೊಡುವುದಕ್ಕಾಗುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು. ಈ ದಿವಸ ಕೊಪ್ಪ ಗ್ರಾಮಕ್ಕೆ ಪ್ರವೇಶ ಇಲ್ಲದ ಹಾಗೆ 500 ಜನ ರಿಸರ್ವ್ ಪೋಲೀಸ್‌ನವರು ಅಲ್ಲಿ ಕೂತಿದ್ದಾರೆ. ಆ ಪೋಲೀಸರು ಅಲ್ಲಿಂದ ಹೊರಬಂದ ಕೂಡಲೇ ತಕ್ಷಣ ಅಲ್ಲಿ ಶಾಂತಿಭಂಗ ಆಗುವ ಸಂಭವ ಇದೆ. ಈ ಅನ್ಯಾಯವನ್ನು ಸರಿಪಡಿಸತಕ್ಕ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿ 10-20 ಸಾವಿರ ರೂಪಾಯಿ ಖರ್ಚು ಮಾಡಿ ರಸ್ತೆ ಮಾಡಿದು ಒಬ್ಬ ವ್ಯಕ್ತಿಯ ಜಮೀನಿಗೆ ಆಕ್ಸೆಸ್ ಕೊಡುವುದಕ್ಕೋಸ್ಕರ ಹಾಗೆ ಮಾಡುವುದಾದರೆ ಸಾವಿರಾರು ರಸ್ತೆಗಳನ್ನು ಮಾಡಬಹುದು. ಮಾನ್ಯ ಮಂತ್ರಿಗಳು ಅಲ್ಲಿ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಬೇಕು.

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ವಿದ್ಯಾಶಾಖೆಯ ಮಂತ್ರಿಗಳು).—ನನ್ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರಾದಂತಹ ಕೃಷ್ಣಪ್ಪನವರು 312ನೇ ನಿಯಮದ ಪ್ರಕಾರ ಸರ್ಕಾರದ ಗಮನಕ್ಕೆ ಏನು ರಸ್ತೆಮಾಡುವ ವಿಚಾರವನ್ನು ತಂದಿದ್ದಾರೋ ಅದು ಮೊನ್ನೆ ದಿವಸ ಸಾಯಂಕಾಲ

ವಿಧಾನಮಂಡಲದ ಸೆಕ್ರೆಟರಿಯೇಟ್‌ನಿಂದ ಪಬ್ಲಿಕ್ ವರ್ಕ್ಸ್ ಇಲಾಖೆಯ ಸೆಕ್ರೆಟರಿಯವರಿಗೆ ಬಂತು. ಮಾನ್ಯ ಸದಸ್ಯರೇ ಹೇಳಿದ ಹಾಗೆ ಇದು ಹಳೆಯ ಚರಿತ್ರೆ. ಸಂಬಂಧಪಟ್ಟ ಫ್ಯಾಕ್ಟ್ಸ್ ಎಲ್ಲವನ್ನೂ ಶಕ್ಷಣ ಕಳುಹಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ನಾನು ತಿಳಿಸಿದ್ದೇನೆ. ಪೋಲೀಸ್‌ನವರು ಏನು 500 ಜನ ಇದ್ದುಕೊಂಡು ಅಲ್ಲಿ ಕೆಲಸ ಮಾಡಿಸುತ್ತಾ ಇದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಾ ಇದ್ದಾರೋ ಆದು ನರಿಯಲ್ಲವೆಂದು ಫೋನ್ ಮಾಡಿ ನಿನ್ನೆ ದಿವಸ ನಾನು ಕಾ ವೇ ತಿಳಿದುಕೊಂಡಿದ್ದೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಲ್ಲಿ ರಿಸರ್ವ್ ಪೋಲೀಸ್ ಇದೆಯೋ, ಇಲ್ಲವೋ ಅನ್ನುವುದನ್ನು ಕಣ್ಣಾರೆ ನೋಡಬೇಕು. ಹಾಗೆ ನೋಡದೆ ಮಾನ್ಯ ಮಂತ್ರಿಗಳು ತಪ್ಪು ಭಾವನೆ ತಾಳಬಾರದು.

ಅಧ್ಯಕ್ಷರು.—ನಿನ್ನೆ ದಿವಸ ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸುತ್ತೇನೆ ಎಂದು ಹೇಳಿದಾಗ ತಮಗೆ ಮಾಹಿತಿ ತರಿಸಲು ಸ್ವಲ್ಪ ವೇಳೆ ಬೇಕು ಎಂದು ಮಂತ್ರಿಗಳು ಹೇಳಿದರು. ಅದನ್ನು ಸಭೆಯಲ್ಲಿ ಹೇಳಿ ಎಂದು ಅವರಿಗೆ ಹೇಳಿದ್ದೆ. ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸುತ್ತೇನೆ ಎಂದು ಮಾತು ಕೊಟ್ಟಿದ್ದರಿಂದ ಅದನ್ನು ಸೇರಿಸದೇ ಹೋದರೆ ನಾನು ನನ್ನ ಕೆಲಸ ಮಾಡಿದಂತಾಗುವುದಿಲ್ಲ ಆದ್ದರಿಂದ ಅದನ್ನು ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸಲಾಯಿತು.

ಶ್ರೀ ಕಾಗೋಡು ತಿಮ್ಮಪ್ಪ.—ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸುತ್ತೇವೆ ಎಂದು ಮೊನ್ನೆ ದಿವಸವೇ ಹೇಳಿದ್ದೀರಿ, ಸರ್ಕಾರಕ್ಕೆ ಈ ವಿಷಯ ಆಗಲೇ ಗೊತ್ತಾಗಿದೆ.

ಅಧ್ಯಕ್ಷರು.—ಸರ್ಕಾರದವರು ಕಾರಾವಕಾಶ ಬೇಕು ಎಂದು ಕೇಳಿದರೆ ನಾನು ಏನು ಮಾಡಬೇಕು? ಧೂಮಮಂತ್ರಗಾಳಿ ಹಾಕಿ ಚಿಟಿಕೆ ಹಾಕಿ ಮಾಡುವುದಕ್ಕಾಗುತ್ತದೆಯೇ?

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಆಜ್ಞೆ ಮಾಡಿದ ಕೂಡಲೇ ಕಾರ್ಯಕ್ರಮ ಪಟ್ಟಿ ಸಿದ್ಧವಾಗುತ್ತದೆ. ಮಾಹಿತಿ ಬಂದಿಲ್ಲ ಎಂದು ಹೇಳಿದರೆ ರಸ್ತೆ ಪೂರ್ತಿ ಆದಮೇಲೆ ಮಾಹಿತಿ ಸಿಕ್ಕುತ್ತದೆಂದು ಕಾಣುತ್ತದೆ.

ಅಧ್ಯಕ್ಷರು.—ಇದು ಬಹಳ ಹಳೆಯ ಕಥೆಯಂತೆ.

Alloting time for the parties in the House

ಶ್ರೀ ಕೆ. ಎನ್. ವೀರಪ್ಪಗೌಡರು.—ತಮ್ಮಲ್ಲಿ ಒಂದು ರಕ್ಷಣೆ ಪಡೆಯಬೇಕಾಗಿ ಬಂದಿದೆ. ನಿನ್ನೆ ದಿವಸ ದೇವೇಗೌಡರು ಹೇಳಿದರು ಸಭೆ ನಡೆಸುವುದಕ್ಕೆ ಬಿಡುವುದಿಲ್ಲ ಎಂದು. ಅದು ತಮ್ಮ ಅಧಿಕಾರ ವ್ಯಾಪ್ತಿಗೆ ಬಿಟ್ಟಿದ್ದು. ನಾವು ಏನೂ ಅದಕ್ಕೆ ಹೇಳುವುದಕ್ಕಾಗುವುದಿಲ್ಲ. ನಮ್ಮ ಪರಿಸ್ಥಿತಿ ಏನು? ವಿರೋಧಪಕ್ಷದವರು ವಿಶೇಷರೀತಿಯಿಂದ ಕಾರಾವಕಾಶ ತೆಗೆದುಕೊಳ್ಳುತ್ತಾರೆ. ಬೇಡಿಕೆಗಳ ಮೇಲೆ ಮೊದಲನೇ ಭಾಷಣ ಅವರಿಗೆ ಹೋಗುತ್ತದೆ. ಅವರಿಗೆ ಕಾಲದ ಪರಿಮಿತಿ ಇಲ್ಲ ತಿರುಗಿ ನಮಗೆ ಬರುವ ಹೊತ್ತಿಗೆ ಮೂರು ನಿಮಿಷ, ಎರಡು ನಿಮಿಷಗಳು ಆಗುತ್ತವೆ. ಎಲ್ಲಾ ಪಕ್ಷದ ಸದಸ್ಯರಿಗೂ ಸಮಯ ನಿಗದಿ ಮಾಡಬೇಕು ಎಂದು ಮೊನ್ನೆ ನಾನು ಸಲಹೆ ಮಾಡಿದೆ. ನಾನು ಒಂದು ಪ್ರಶ್ನೆ ಈ ಸಭೆಯಲ್ಲಿ ಹಾಕಿದ್ದೆ. ಅದರಲ್ಲಿ ನಮಗೆ ಬೇಕಾದುದು ಸರ್ಕಾರದ ಆಶ್ವಾಸನೆ ಅದನ್ನು ಕೇಳುವುದಕ್ಕೆ ಅವಕಾಶ ಸಿಗಲಿಲ್ಲ. ಅದರೆ ಆಪೋಜಿಷನ್ ಪಾರ್ಟಿ ಲೀಡರ್ ಪ್ರಶ್ನೆಯ ಬಗ್ಗೆ ಅರ್ಧ ಗಂಟೆ ಚರ್ಚೆ ಮಾಡಬಹುದಿತ್ತು, ಆದು ಬಿಟ್ಟು ಅವರ ಪ್ರಶ್ನೆಗೇ ಬಹಳ ಕಾಲ ಹೋಯಿತು. ಆ ಕಾಲದೊಳಗೆ ಅವರು ಏನು ಕೇಳಿದರೋ, ಮಂತ್ರಿಗಳು ಏನು ಹೇಳಿದರೋ ಅರ್ಥವಾಗಲಿಲ್ಲ. ನನಗೆ ನನ್ನ ಪ್ರಶ್ನೆಯ ಬಗ್ಗೆ ಆಶ್ವಾಸನೆ ಕೂಡ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಪ್ರಶ್ನೆ ಹಾಕುವುದು ಆಶ್ವಾಸನೆ ತೆಗೆದುಕೊಳ್ಳುವುದಕ್ಕೆ, ಅದಕ್ಕೆ ಅವಕಾಶ ಸಿಕ್ಕದೆ ಹೋಗುವುದರಿಂದ ನಮಗೆ ತಾವು ಸಹಾಯ ಮಾಡಬೇಕೆಂದು ಕೇಳಬೇಕಾಗಿ ಬಂದಿದೆ.

ಅಧ್ಯಕ್ಷರು.—ಆಗ ನಾನು ನೋಡುತ್ತಲೇ ಕುಳಿತುಕೊಂಡಿದ್ದೆ. ಸದಸ್ಯರ ಮಧ್ಯೆ ವಾಗ್ಯುದ್ಧ ಆಯಿತು. ಮಾನ್ಯ ವೀರಪ್ಪಗೌಡರು ಮತ್ತು ಇನ್ನೂ ಕೆಲವರು ಎದ್ದು ನಿಂತುಕೊಂಡು ಗಲಾಟೆ ಮಾಡುವುದಕ್ಕೆ ಶುರು ಮಾಡಿದರು. ಅದಕ್ಕೆ ನಾನು ಪ್ರಶ್ನೆ ಹಾಕಿದವರಿಗೆ ಉತ್ತರವಾದರೂ ಸಿಗಲಿ ಎಂದು ಪ್ರಶ್ನೆಹಾಕಿದವರಿಗೇ 3-3 ಸಾರ್ತಿ ಉಪ ಪ್ರಶ್ನೆ ಹಾಕಲು ಅವಕಾಶ ಮಾಡಿಕೊಟ್ಟು, ಪ್ರಶ್ನೆಗಳನ್ನು ಮುಗಿಸಿಕೊಂಡು ಬಂದೆ. ಮಾನ್ಯ ವೀರಪ್ಪಗೌಡರಿಗೂ ಚಾನ್ಸ್ ಕೊಟ್ಟೆ. ಮಾನ್ಯ ಸದಸ್ಯರಿಗೆ ಬೇಕಾದ ಉತ್ತರ ಕೊಡುವುದು ಸರ್ಕಾರದ ಕಡೆಯಿಂದ, ನನ್ನ ಕಡೆಯಿಂದ ಅಲ್ಲ. ಇನ್ನು